# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/333/12-13

ದಿನಾಂಕ : 05-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ದೊಡ್ಡ ರಂಗಾರೆಡ್ಡಿ ತಂದೆ ರಾಮಚಂದ್ರರೆಡ್ಡಿ, ಕೊರ್ಲಗುಂದಿ ಗ್ರಾಮ, ಬಳ್ಳಾರಿ ತಾಲ್ಲೂಕು<br>(ಶ್ರೀ ಡಿ. ಮಲ್ಲಯ್ಯ, ವಕೀಲರು, ಬಳ್ಳಾರಿ) | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಕೋಳೂರು<br>3. ಗ್ರಾಮಲೆಕ್ಕಾಧಿಕಾರಿಗಳು, ದಮ್ಮೂರು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ದಮ್ಮೂರು | 340/ಎ/1 | 2.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕೋಳೂರು ಇವರ ಎಂ ಆರ್ ನಂ 39/90-91 ರ ಆದೇಶದಂತೆ ಪಹಣಿ ಪತ್ರಿಕೆಯಲ್ಲಿ ವಾದಿಯ ಹೆಸರು ನಮೂದಾಗದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 12-11-2013, 20-02-2015, 11-12-2015, ಮತ್ತು 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಪರವಕೀಲರು ದಿನಾಂಕ: 05-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ದಮ್ಮೂರು ಗ್ರಾಮದ ಸ.ನಂ 340/ಎ/1 ವಿಸ್ತೀರ್ಣ: 2.00 ಎಕರೆ ಜಮೀನಿಗೆ ಸಂಬಂಧಿಸಿದಂತೆ , ಸದರಿ ಜಮೀನನ್ನು ಬೈಲೂರು ಮಾರೆಪ್ಪ ತಂದೆ ಲಿಂಗಪ್ಪ ಕೊರ್ಲಗುಂದಿ ಗ್ರಾಮ ಇವರಿಂದ ನೋಂದಾಯಿತ ಕ್ರಯ ಪತ್ರ 751/90-91 ದಿನಾಂಕ 02-07-1990 ರಂದು ಖರೀದಿಸಿದ್ದು ಕ್ರಯ ಪತ್ರದನ್ವಯ ಕಂದಾಯ ನಿರೀಕ್ಷಕರು, ಕೋಳೂರು ಇವರ ಎಂ ಆರ್ ನಂ 39/90-91 ದಿನಾಂಕ 06-05-1991 ರ ಆದೇಶದಂತೆ ಹಕ್ಕುಬದಲಾವಣೆಯಾಗಿದ್ದು ಪಹಣಿ ಪತ್ರಿಕೆಯಲ್ಲಿ ವಾದಿಯ ಹೆಸರು ನಮೂದು ಮಾಡಿಕೊಡುವಂತೆ ಕೋರಿರುತ್ತಾರೆ. ಮುಂದುವರೆದು ಪ್ರಕರಣದಲ್ಲಿಯ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ ಮಾರಾಟಗಾರರಾದ ಬೈಲೂರು ಮಾರೆಪ್ಪ ತಂದೆ ಲಿಂಗಪ್ಪ ಕೊರ್ಲಗುಂದಿ ಗ್ರಾಮ ಇವರ ಹೆಸರು ಪಹಣಿಗಳಲ್ಲಿ ನಮುದಾಗಿರುವುದು ಕಂಡು ಬಂದಿರುವುದಿಲ್ಲ ಹಾಗೂ ಪಹಣಿ ಕಾಲಂ 9 ರಲ್ಲಿ ಇರುವವರನ್ನು ಅಗತ್ಯ ಪಕ್ಷಗಾರರನ್ನಾಗಿಸುವಲ್ಲಿ , ಅವರನ್ನು ಮೇಲ್ಮನವಿ ಅರ್ಜಿಯಲ್ಲಿ ಸೇರಿಸುವಲ್ಲಿ ಅಪೀಲುದಾರರು ವಿಫಲರಾಗಿರುತ್ತಾರೆ. ಕಾರಣ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.

## :: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ದಮ್ಮೂರು ಗ್ರಾಮದ ಸ.ನಂ 340/ಎ/1 ವಿಸ್ತೀರ್ಣ: 2.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಅಪೀಲುದಾರರಿಗೆ ನಿಜವಾಗಿಯೂ ಪ್ರಶ್ನಿತ ಆಸ್ತಿಗೆ ಸಂಬಂಧಿಸಿದಂತೆ ಹಿತಾಸಕ್ತಿ ಇದ್ದಲ್ಲಿ ಚಾಲ್ತಿ ಪಹಣಿಯಲ್ಲಿನ ಕಾಲಂ 9 ರಲ್ಲಿರುವವರನ್ನು ಅಗತ್ಯರಿರುವ ಪಕ್ಷಗಾರರನ್ನಾಗಿಸಿ ಮೇಲ್ಮನವಿ ಸಲ್ಲಿಸುವ ಮುಕ್ತ ಅವಕಾಶ ನೀಡುತ್ತಾ ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದೆ. ಈ ಆದೇಶವನ್ನುಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 05-08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು
ಬಳ್ಳಾರಿ

ಪ್ರತಿಯನ್ನು ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ತಹಶೀಲ್ದಾರರು ಬಳ್ಳಾರಿ ಇವರಿಗೆ